## ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

ಉಪಸ್ಥಿತರುಃ- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ
ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,

ಸಿ.ಸಿ. ನಂಃ **46/2022**

ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರರ
ಪೊಲೀಸ್ ಠಾಣೆ

// ವಿರುದ್ಧ //

ಆರೋಪಿ ಃ ನಿಂಗಪ್ಪ

### ದೋಷಾರೋಪಣೆ

| | |
|---|---|
| ಆರೋಪಿ **1.** | ನಿಂಗಪ್ಪ ತಂದೆ ಭೀಮರಾಯ ಕಲಾಲ ವಃ 28 ವರ್ಷ,<br>ಉಃ ವ್ಯಪಾರ , ಸಾಃ ವಂಕಸಂಬ್ರ ತಾಃ ಮತ್ತು ಜಿಃ ಯಾದಗಿರಿ. |

ದಿನಾಂಕ 08.12.2021 ರಂದು ಸೈದಾಪೂರ ಪೋಲಿಸ್ ಠಾಣೆ ಸರಹದ್ದಿಯಲ್ಲಿ ಬರುವ ವಂಕಸಂಬ್ರ ಗ್ರಾಮದಲ್ಲಿ ಆರೋಪಿಯಾದ ನೀನು ವಂಕಸಂಬ್ರ-ಬದ್ದೆಪಲ್ಲಿ ಮುಖ್ಯ ರಸ್ತೆಯ ಪಕ್ಕಕ್ಕೆ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ 20 ಲೀಟರ್ ಸೆಂದಿಯನ್ನು ತಯಾರಿಸಿ ಮಾರಾಟ ಮಾಡಲು ಸಂಗ್ರಹಿಸಿ ಇಟ್ಟಿದ್ದು, ಈ ಮೂಲಕ ಆರೋಪಿತನಾದ ನೀನು ಭಾರತೀಯ ದಂಡ ಸಂಹಿತೆ ಕಲಂ.32, ಕೆ.ಇ ಆಕ್ಟ್ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

2. ಈ ಮೇಲೆ ಹೇಳಿದ ದಿನಾಂಕ ಸ್ಥಳ, ಸಮಯ ಮತ್ತು ಸಂದರ್ಭದಂದು ಆರೋಪಿಯಾದ ನೀನು ವಂಕಸಂಬ್ರ-ಬದ್ದೆಪಲ್ಲಿ ಮುಖ್ಯ ರಸ್ತೆಯ ಪಕ್ಕಕ್ಕೆ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ 20 ಲೀಟರ್ ಸೆಂದಿಯನ್ನು ತಯಾರಿಸಿ ಮಾರಾಟ ಮಾಡಿದ್ದು, ಈ ಮೂಲಕ ಆರೋಪಿತನಾದ ನೀನು ಭಾರತೀಯ ದಂಡ ಸಂಹಿತೆ ಕಲಂ.34,ಕೆ.ಇ ಆಕ್ಟ್ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

3.  ಮೂರನೆಯದಾಗಿ ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಸಿಂದಿ ಮಾರಾಟ ನಿಷೇಧ ಇದ್ದದ್ದು ಗೊತ್ತಿದ್ದರು ಸಹ ವಿಷಕಾರಕ ಸಿಂದಿಯನ್ನು ಅಕ್ರಮವಾಗಿ ಮಾನವನು ಸೇವಿಸಿದರೆ ಜೀವಕ್ಕೆ ಹಾನಿಯುಂಟಾಗುವ ಸಿಂದಿ ಮಾರಾಟ ಮಾಡುತ್ತಿದ್ದು, ಈ ಮೂಲಕ ನೀನು ಭಾ. ದಂ. ಸಂ.ಕಲಂ. 284 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತಿರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

ದಿನಾಂಕಃ **05.10.2024**
ಸ್ಥಳಃ ಯಾದಗಿರಿ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಯಾದಗಿರಿ.